**ಕರ್ನಾಟಕ ಸರ್ಕಾರ**

ಕರ್ನಾಟಕ
ವಿಧಾ...ಧ, ಬ...

ಕ್ರಮಾಂಕ: ಇಡಿ 142 ಎಸ್‌ಎಲ್‌ಬಿ 98 ದಿನಾಂಕ:27-12-2002.

ಇಂದ
ಪ್ರಧಾನ ಕಾರ್ಯದರ್ಶಿ, ಪ್ರಾ ಮತ್ತು ಪ್ರೌಢ ಶಿಕ್ಷಣ,
ಕರ್ನಾಟಕ ಸರ್ಕಾರ, ಬೆಂಗಳೂರು-560 001.

ಇವರಿಗೆ

1) ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

2) ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ವೃಂದ ಮತ್ತು ನೇಮಕಾತಿ ನಿಯಮಗಳ ಅಡಿಯಲ್ಲಿ ಒಂದೇ ಹುದ್ದೆ ಹೊಂದಿರುವ ವೃಂದಗಳಿಗೆ ಸಂಬಂಧಿಸಿದಂತೆ ಮೀಸಲಾತಿ ನಿಯಮಗಳನ್ನು ಪಾಲಿಸುವ ಬಗ್ಗೆ.
ಉಲ್ಲೇಖ: ಸರ್ಕಾರದ ಸಮಸಂಖ್ಯೆಯ ದಿನಾಂಕ:03-02-2000ರ ಪತ್ರ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ:03-02-2000 ರಲ್ಲಿ ನೀಡಲಾಗಿದ್ದ ಸೂಚನೆಗಳನ್ನು ಹಿಂದಕ್ಕೆ ಪಡೆಯಲಾಗಿದೆ. ಈ ಬಗ್ಗೆ ಸರ್ಕಾರ ಸದರಿ ವಿಷಯವನ್ನು ಆದ್ಯಂತವಾಗಿ ಪುನರ್ ಪರಿಶೀಲಿಸಿ, ಕೆಳಗಿನಂತೆ ಸ್ಪಷ್ಟೀಕರಣವನ್ನು ನೀಡಿದೆ:-

1. ಒಂದು ಖಾಸಗಿ ಆಡಳಿತ ಸಂಸ್ಥೆಯ ಅಡಿಯಲ್ಲಿ ಒಂದೇ ಶಾಲೆ ಇದ್ದಲ್ಲಿ ಹಾಗೂ ಆ ಶಾಲೆಯಲ್ಲಿ ಒಂದೇ ಹುದ್ದೆಯಿರುವ ವೃಂದಗಳಿದ್ದಲ್ಲಿ ಅದಕ್ಕೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 27 ಸಹಿಮ 97 ದಿನಾಂಕ:07-09-1998ರನ್ವಯ ನೇರ ನೇಮಕಾತಿಗಾಗಲಿ ಅಥವಾ ಮುಂಬಡ್ತಿಗಾಗಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗಾಗಿ ಭಾರತ ಸಂವಿಧಾನದ ಅನುಚ್ಛೇಧ 16ರ ಅಡಿಯಲ್ಲಿ ಹೊರಡಿಸಿದ ಮೀಸಲಾತಿ ಆದೇಶಗಳು ಅನ್ವಯವಾಗುವುದಿಲ್ಲವೆಂದು ಸ್ಪಷ್ಟೀಕರಿಸಲಾಗಿದೆ. ಹಾಗೂ,
2. ಒಂದು ಖಾಸಗಿ ಆಡಳಿತ ಸಂಸ್ಥೆಯ ಅಡಿಯಲ್ಲಿ ಒಂದಕ್ಕಿಂತ ಹೆಚ್ಚು ಶಾಲೆಗಳು ಇದ್ದಲ್ಲಿ ಹಾಗೂ ಆ ಶಾಲೆಗಳಲ್ಲಿ ಒಂದೇ ಹುದ್ದೆಯಿರುವ ವೃಂದಗಳಿದ್ದಲ್ಲಿ ಅಂತ ಎಲ್ಲಾ ಹುದ್ದೆಗಳನ್ನು ವೃಂದವಾರು ಒಟ್ಟುಗೂಡಿಸಿ ನೇರ ನೇಮಕಾತಿ ಅಥವಾ ಮುಂಬಡ್ತಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗಾಗಿ ಭಾರತ ಸಂವಿಧಾನದ ಅನುಚ್ಛೇಧ 16 ರಡಿಯಲ್ಲಿ ಹೊರಡಿಸಿದ ಮೀಸಲಾತಿ ಆದೇಶಗಳನ್ನು ಅನ್ವಯಿಸಬೇಕೆಂದು ಸ್ಪಷ್ಟೀಕರಿಸಲಾಗಿದೆ.

ನಿಮ್ಮ ನಂಬುಗೆಯ
— ಸಹಿ/-
(ಸಿದ್ಧಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ